ಇ) ಈ ಕೆಳಗಿನ ಕಾರ್ಖಾನೆಗಳ ಮೇಲೆ ದೂರುಗಳು ಬಂದಿವೆ.

1. ಮೆ: ಬೃಂದಾವನ್ ಪಾಸ್ಟೇಟ್ಸ್, ದೊಡ್ಡಬಳ್ಳಾಪುರ,
2. ಮೆ:ಗೋ ಗೋ ಎಕ್ಸ್‌ಪೋಟ್ಸ್, ದೊಡ್ಡಬಳ್ಳಾಪುರ,
3. ಮೆ. ಕೆನರಾ ಇಂಡಸ್ಟ್ರೀಸ್, ಹುಣಸೂರು ರಸ್ತೆ, ಹೊಡಗಳ್ಳಿ, ಮೈಸೂರು
4. ಮೆ.ಎನ್.ಎಂ. ನೈಟ್ರೋಸಿಂಥೇಟಿಕ್ಸ್, ಹುಣಸೂರು ರಸ್ತೆ, ಮೈಸೂರು
5. ಮೆ: ಸ್ವಸ್ತಿಕ್ ಇಂಡಸ್ಟ್ರೀಸ್, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು.
6. ಮೆ: ಉಗಮ ಎಂಟರ್‌ಪ್ರೈಸಸ್, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು
7. ಮೆ: ಮೈಸೂರು ಎಂಟರ್ ಪ್ರೈಸಸ್, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು.
8. ಮೆ: ಶ್ರೀಕೃಷ್ಣ ಎಂಟರ್ ಪ್ರೈಸಸ್, ಹೆಬ್ಬಾಳ ಕೈಗಾರಿಕಾ ಪ್ರದೇಶ, ಮೈಸೂರು
9. ಮೆ: ಜ್ವಾಲಾ ಎಂಟರ್ ಪ್ರೈಸಸ್, ಬೊಗಾದಿ, ಮೈಸೂರು.
10. ಮೆ:ಎಸ್.ಎನ್. ಕೆಮಿಕಲ್ಸ್, ಇಲವಾಲ, ಮೈಸೂರು
11. ಮೆ: ವೆಟ್‌ಕೇರ್ ಅರ್ಗ್ಯಾನಿಕ್ಸ್, ದೊಡ್ಡಬಳ್ಳಾಪುರ
12. ಅಸೋಸಿಯೇಟಡ್ ಡ್ರಗ್ ಕಂಪನಿ ಮೈಸೂರು ರೋಡ್, ಬೆಂಗಳೂರು
13. ವಾಣಿ ಆರ್ಗ್ಯಾನಿಕ್ಸ್, ಕಲ್ಲಾರ ಕೈಗಾರಿಕಾ ಪ್ರದೇಶ, ಬೀದರ್.
14. ಸಾತ್ವಿಕ್ ಡ್ರಗ್, ಕೊಲ್ಹಾರ ಕೈಗಾರಿಕಾ ಪ್ರದೇಸ, ಬೀದರ್
15. ಬಿ.ಎಲ್. ಕೆಮಿಕಲ್ಸ್, ಹುಮನಾಬಾದ್; ಬೀದರ್.
16. ಸಿ.ವೆಲ್ ಡ್ರಗ್ಸ್, ಕೊಲ್ಹಾರ ಕೈಗಾರಿಕಾ ಪ್ರದೇಶ, ಬೀದರ್
17. SOL ಕೊಲ್ಹಾರ ಕೈಗಾರಿಕಾ ಪ್ರದೇಶ, ಬೀದರ್
18. AGIPI ಕೊಲ್ಹಾರ ಕೈಗಾರಿಕಾ ಪ್ರದೇಶ, ಬೀದರ್
19. ವೆಟ್ ಸಿಂಥೋ ಮೆಡಿಕಾಮೆಂಟ್ಸ್ , ಕೊಲ್ಹಾರ ಕೈಗಾರಿಕಾ ಪ್ರದೇಶ, ಬೀದರ್
20. ಆರ್-ಕೆಮ್, (ಸೋಮನಹಳ್ಳಿ) ಹುಮನಾಬಾದ್, ಬೀದರ್.
21. ಸತ್ಯದೀಪ್ತ ಫಾರ್ಮಸಿಟಿಕಲ್ಸ್, ಹುಮನಾಬಾದ್, ಬೀದರ್

ಈ) ಮೇಲೆ ತಿಳಿಸಿದ ಉದ್ದಿಮೆಗಳಿಗೆ ಈ ಕೆಳಗಿನಂತೆ ಕ್ರಮ ಜರುಗಿಸಲಾಗಿದೆ.

ಹನ್ನೆರಡು ಮುಚ್ಚುವ ಆದೇಶ ಹೊರಡಿಸಲಾಗಿದೆ.

ನಾಲ್ಕು ನಿಷೇದಾಜ್ಞೆ ಹೊರಡಿಸಲಾಗಿದೆ.

ನಾಲ್ಕು ಉದ್ದೇಶಿತ ಮುಚ್ಚುವ ಆದೇಶ ಹೊರಡಿಸಲಾಗಿದೆ.

ನಾಲ್ಕು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.

ಸಿ.ಆರ್.ಎಫ್. ಅಡಿಯಲ್ಲಿ ರಸ್ತೆಗಳ ನಿರ್ಮಾಣ

3305 (3757) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಿ.ಆರ್.ಎಫ್.ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ಕಿಮೀ ಉದ್ದದ ರಸ್ತೆಗಳನ್ನು ತೆಗೆದುಕೊಳ್ಳಲಾಗಿದೆ; ಜಿಲ್ಲಾವಾರು ವಿವರ ನೀಡುವುದು;

ಆ) ಈ ರಸ್ತೆಗಳ ನಿರ್ಮಾಣಕ್ಕಾಗಿ ತಗಲುವ ವೆಚ್ಚ ಎಷ್ಟು; ರಸ್ತೆವಾರು ವಿವರ ನೀಡುವುದು;

ಇ) 2002–03ನೇ ಸಾಲಿನಲ್ಲಿ ಈ ರಸ್ತೆಗಳ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣ ಎಷ್ಟು; ಇದರಲ್ಲಿ ಈವರೆಗೆ ಖರ್ಚು ಮಾಡಿರುವ ಹಾಗೂ ಉಳಿದಿರುವ ಹಣ ಎಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ರಾಜ್ಯದಲ್ಲಿ 1795 ಕಿಮೀ ಉದ್ದದ ರಸ್ತೆಗಳನ್ನು ತಎಗೆದುಕೊಳ್ಳಲಾಗಿದೆ. ಜಿಲ್ಲಾವಾರು ವಿವರಗಳಿಗಾಗಿ ಪ್ರತ್ಯೇಕ ಪಟ್ಟಿ ಲಗತ್ತಿಸಲಾಗಿದೆ.

ಆ) ಈ ರಸ್ತೆಗಳ ನಿರ್ಮಾಣಕ್ಕಗಿ ತಗಲುವ ಅಂದಾಜು ವೆಚ್ಚ ರೂ. 164.08 ಕೋಟಿಗಳು. ರಸ್ತೆವಾರು ವಿವರಗಳಿಗಾಗಿ ಪ್ರತ್ಯೇಕ ಪಟ್ಟಿ ಲಗತ್ತಿಸಲಾಗಿದೆ.

ಇ) 2002–03 ನೇ ಸಾಲಿನಲ್ಲಿ ಈ ರಸ್ತೆಗಳ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನ ರೂ. 27.50 ಕೋಟಿಗಳು. ಪೂರ್ಣ ಮೊತ್ತ ಖರ್ಚಾಗಿದ್ದು, ಅನುದಾನದಲ್ಲಿ ಯಾವುದೇ ಉಳಿಕೆಯಾಗಿರುವುದಿಲ್ಲ.

Annexure -1

ABSTRACT FOR DISTRICTWISE DETAILS OF 198 APPROVED CRF WORKS

Sl. No.	District	No. of Works	Length of Road proposed for Improvement	Sanctioned Estimated cost (Rs.in Lakhs)
1.	Bagalkot	7	71.50	597.37
2.	Bangalore (Rural)	8	100.45	857.50
3.	Belgaum	16	146.91	1499.55
4.	Bidar	15	114.95	1092.97
5.	Bijapur	6	32.40	404.00
6.	Chamarajnagar	5	35.15	271.00
7.	Chickmagalore	9	66.00	511.00
8.	Chitradurga	5	51.64	302.00
9.	Dakshina Kannada	8	107.05	809.10
10.	Davanagere	5	49.00	380.00
11.	Dharwad	8	50.99	561.87
12.	Gadag	4	38.10	300.00
13.	Gulbarga	18	138.60	1333.16
14.	Hassan	14	118.36	1006.73
15.	Haveri	5	40.15	280.00
16.	Kodagu	2	15.90	115.00

1	2	3	4	5
17.	Kolar	6	35.28	278.61
18.	Koppal	4	19.70	210.00
19.	mandya	16	143.21	1797.00
20.	Mysore	4	37.81	260.00
21.	Raichur	6	33.70	298.91
22.	Shimoga	7	93.93	460.80
23.	Tumkur	9	164.50	2091.59
24.	Udupi	8	69.40	572.20
25.	Uttara Kannada	3	20.70	118.00
	Total	**198**	**1795.37**	**16408.44**

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಕಂಪು ಯೋಜನೆ

3306 (3758) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ಕಂಪು ಯೋಜನೆಯನ್ನು ಜಾರಿಗೆ ತರಲಾಗಿದೆಯೆ;

ಆ) ಹಾಗಿದ್ದರೆ, ಯಾವ ಯಾವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ; ಇದರ ಉದ್ದೇಶವೇನು;

ಇ) ಈ ಯೋಜನೆಯನ್ನು ಬೇರೆ ರಾಜ್ಯದ ಖಾಸಗಿಯವರಿಗೆ ವಹಿಸಲಾಗಿದೆಯೇ; ಹಾಗಿದ್ದರೆ, ಇದರ ಮಾಹಿತಿ ನೀಡುವುದು; ಎಷ್ಟು ವರ್ಷಗಳವರೆಗೆ ವಹಿಸಲಾಗಿದೆ;

ಈ) ಖಾಸಗಿಯವರು ಪ್ರತಿಯೊಬ್ಬ ಅಭ್ಯರ್ಥಿಗಳಿಂದ ಪಡೆಯುತ್ತಿರುವ ಹಣ ಎಷ್ಟು; ಇದರಿಂದ ಅಭ್ಯರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುವುದಿಲ್ಲವೇ;

ಉ) ಈ ಯೋಜನೆಯನ್ನು ಹೊರ ರಾಜ್ಯದವರಿಗೆ ನೀಡಿರುವುದರಿಂದ ಹೊರ ರಾಜ್ಯದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದರಿಂದ ರಾಜ್ಯದ ಅಭ್ಯರ್ಥಿಗಳು ಸರ್ಕಾರಿ ಕೆಲಸದಿಂದ ವಂಚಿತರಾಗುವುದಿಲ್ಲವೇ;

ಊ) ಈ ಯೋಜನೆಯನ್ನು ಖಾಸಗಿಯವರಿಗೆ ವಹಿಸಿರುವುದರಿಂದ ಸರ್ಕಾರ ಹಾಗೂ ಉದ್ಯೋಗ ತರಬೇತಿ ಇಲಾಖೆಯು ಉದ್ಯೋಗ ವಿನಿಮಯ ಕೇಂದ್ರಗಳ ಮೇಲೆ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುವುದಿಲ್ಲವೇ;

ಋ) ಹಾಗಾದರೆ, ಈ ಯೋಜನೆಯನ್ನು ರದ್ದುಪಡಿಸಲಾಗುವುದೆ;

ಎ) ಇಲ್ಲದಿದ್ದರೆ, ಈ ಯೋಜನೆಯನ್ನು ಜಾರಿಗೊಳಿಸಿರುವುದರಿಂದ ಸರ್ಕಾರ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮುಚ್ಚಲಾಗುವುದೇ?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) ಹೌದು.